# ಹಸಿರು ಶಾಲೆಗಳ ಕಾರ್ಯಕ್ರಮ: ತರಗತಿಯಾಚೆಗಿನ ಒಂದು ಅನುಭವ



**ಸುಮಿತಾ ದಾಸ್‌ಗುಪ್ತ**

ಕಳೆದ ಸರಿಸುಮಾರು 25 ವರ್ಷಗಳಿಂದ ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಪರಿಸರ ಶಿಕ್ಷಣವು ತನ್ನ ವಿವಿಧ ಅವತಾರಗಳಲ್ಲಿ ಕಾಣಿಸಿಕೊಳ್ಳುತ್ತಾ ಬಂದಿದೆ. ಕೆಲವೊಮ್ಮೆ ಅದು 'ಮುಖ್ಯಧಾರೆ ವಿಷಯ'ಗಳ ಸಖಿಯಂತೆ-ರಸಾಯನ ವಿಜ್ಞಾನ ಅಥವಾ ಚರಿತ್ರೆಯ ಪಠ್ಯಪುಸ್ತಕಗಳ ಪುಟಗಳ ನಡುವೆ ಹುದುಗಿಕೊಂಡಿರುತ್ತದೆ ಅಥವಾ ಇನ್ನು ಕೆಲವೊಮ್ಮೆ ಎಲ್ಲ ಪಠ್ಯೇತರ ಚಟುವಟಿಕೆಗಳ ಸಾಮಾನ್ಯ ವಿಷಯವೆಂಬಂತೆ ಮೂಡಿ ಸ್ಥಳೀಯ ಉದ್ಯಾನದಲ್ಲಿನ 'ನಿಸರ್ಗ ನಡಿಗೆ'ಯಿಂದ ತೊಡಗಿ ಸ್ಥಳೀಯ ಪ್ರಾಣಿ ಪ್ರಪಂಚವನ್ನು ಕುರಿತ ಪುಟ್ಟ ಪುಸ್ತಕದ ತಯಾರಿಯ ವರೆಗೆ ಇದರ ಹರಹು ಕಾಣಿಸಿದೆ. ಆದರೆ ಇಲ್ಲಿ ತನಕ ಇದು ಅಧಿಕೃತ ಗ್ರೇಡಿಂಗ್ ವ್ಯವಸ್ಥೆಯ ಭಾಗವಾಗಿರಲೇ ಇಲ್ಲ. ದೇಶದ ಉನ್ನತ ಪಠ್ಯಕ್ರಮ ರಚನಾಕಾರರು ಮತ್ತು ಎರಡು ಪ್ರಭಾವಿ ಶಿಕ್ಷಣ ಮಂಡಳಿಗಳು 10 ನೇ ತರಗತಿ ಪರೀಕ್ಷೆಯ ಮುಖ್ಯಘಟ್ಟದಲ್ಲಿ ಅಂಕಗಳನ್ನು ನೀಡಲು ನಿರ್ಧರಿಸಿದಾಗಲೇ ಪರಿಸರ ಅಧ್ಯಯನವು ತೆರೆಮರೆಯ ಪ್ರದರ್ಶನವಾಗಿದ್ದುದು ನಿಂತಿತು. ಪ್ರತಿಯೊಂದು ಅಂಕವೂ ಮುಂದಣ ಜೀವನ ಪಥದ ಮೆಟ್ಟಿಲುಕಲ್ಲು ಎಂಬ ಪರಿಸ್ಥಿತಿ ಬಂದಾಗ ಅದರಲ್ಲೂ ಇನ್ನೂ ಕೆಲವು ಕುತೂಹಲಕಾರಿಯಾದ ಷರತ್ತುಗಳು ಕೂಡಿ ಜಾರಿಗೆ ಬಂದಾಗ ಇದಕ್ಕಿಂತ ಮಹತ್ವ ಪೂರ್ಣ ಹೆಜ್ಜೆ ಬೇರೆ ಇಲ್ಲ ಎಂದು ಹೇಳಬಹುದು. ಅಲ್ಲ. ಈಗಿನ ಮಾರ್ಗದರ್ಶಿ ಸೂತ್ರಗಳ ಪ್ರಕಾರ ಇಲ್ಲಿನ ಮೌಲ್ಯಮಾಪನ ಪದ್ಧತಿಯು ಸಾಂಪ್ರದಾಯಿಕ 'ಪಠ್ಯಪುಸ್ತಕ ಓದು-ಪರೀಕ್ಷೆ ಬರಿ'ಎನ್ನುವ ರೀತಿಯದ್ದಲ್ಲ. 'ಕ್ಷೇತ್ರ'ದಲ್ಲಿ ಪರೀಕ್ಷಾರ್ಥಿ ಎಷ್ಟು ಚಟುವಟಿಕೆಯಿಂದಿದ್ದ ಎನ್ನುವುದರ ಮೇಲೆ ಗ್ರೇಡ್ ನೀಡಲಾಗುವುದು.

ನಿರೀಕ್ಷಿಸಿದಂತೆ, ಈ ಫರ್ಮಾನು ಜಾರಿಗೆ ಬಂದ ನಂತರ ಚಟುವಟಿಕೆಗಳ ಪ್ರವಾಹವೇ ಶುರುವಾಯಿತು. ಪರಿಸರ ಅಧ್ಯಯನವನ್ನು ಒಂದು ಜೀವಂತ, ಉಸಿರಾಡುತ್ತಿರುವ ಮತ್ತು ಕ್ರಿಯಾಶೀಲ ವಿಷಯವೆಂಬಂತೆ ನೋಡಬೇಕೆಂದು ಮತ್ತು ನಡೆಸಿಕೊಳ್ಳಬೇಕೆಂದು ಅಧ್ಯಾಪಕರಿಗೆ ನೀಡಿದ ತರಬೇತಿಯಲ್ಲಿ ಹೇಳಿಕೊಟ್ಟೇ ಇಲ್ಲ. ಈ ಕೆಲಸಕ್ಕೆ ಒಗ್ಗುವ ಸಿದ್ಧ ಸಂಪನ್ಮೂಲಗಳಾಗಲೀ, ಪಠ್ಯಪುಸ್ತಕಗಳಾಗಲೀ, ಆಕರ ಗ್ರಂಥಗಳಾಗಲೀ ಇಲ್ಲವೇ ಇಲ್ಲ. ಆದರೆ ಎಂದಿನಂತೆಯೇ ಶಿಕ್ಷಕರು ಈ ಸಂದರ್ಭದಲ್ಲೂ ತಮ್ಮ ಚೇತರಿಕೆ ಸ್ವಭಾವದಿಂದ ಸಂದರ್ಭಕ್ಕೆ ತಕ್ಕ ಸಾಮರ್ಥ್ಯ ತೋರಿ, ಪರಿಸರ ಅಧ್ಯಯನವನ್ನು (ಗ್ರೇಡು ನೀಡಬಹುದಾದ) ಮೂರ್ತರೂಪದ ಘಟಕವಾಗಿಸಲು ಕೆಲವು ಗಮನಾರ್ಹ ವಿಚಾರಗಳನ್ನು ಪರ್ಯಾಲೋಚಿಸಿದ್ದಾರೆ.

ಗ್ರೀನ್ ಸ್ಕೂಲ್ಸ್ ಪ್ರೋಗ್ರಾಮ್ (ಜಿಎಸ್‌ಪಿ) ಅಥವಾ 'ಹಸಿರು ಶಾಲೆ ಯೋಜನೆ'[1] ಎನ್ನುವುದು ದೆಹಲಿಯಲ್ಲಿರುವ ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್ವೈರನ್ಮೆಂಟ್ ಸಂಸ್ಥೆಯ (CSE), ಪ್ರಮುಖ ಕಾರ್ಯಕ್ರಮವಾಗಿದ್ದು ಪರಿಸರ ಅಧ್ಯಯನ ತರಗತಿ ಅತ್ಯಂತ ಮಹತ್ವದ್ದು ಎಂದು ಭಾವಿಸುವ ಕಾರಣ ಇದು ಶಿಕ್ಷಕರಿಗೆ ಸಹಾಯಹಸ್ತ ನೀಡಲು ಪ್ರಯತ್ನಿಸುತ್ತಿದೆ. ಈ ಭೂಮಿಯ ಭವಿಷ್ಯದ ವಾರಸುದಾರರಿಗೆ ಹೊಚ್ಚಹೊಸ ದೃಷ್ಟಿಕೋನದೊಂದಿಗೆ ಪರಿಸರ ಅಧ್ಯಯನ ಎಂಬ ವಿಷಯವನ್ನು ಪರಿಚಯಿಸಲಾಗುತ್ತಿದೆ. ಯಾವುದೇ ಪರಿಸ್ಥಿತಿಯಲ್ಲೂ, ಇದನ್ನು ಇನ್ನೊಂದು 'ನೀರಸ' ವಿಷಯವಾಗಿ

---

*[1] ಪ್ರಸ್ತುತ, 22 ರಾಜ್ಯಗಳು ಮತ್ತು 1 ಕೇಂದ್ರಾಡಳಿತ ಪ್ರದೇಶವನ್ನು ಪ್ರತಿನಿಧಿಸುವ ಸುಮಾರು 30,000 ಶಾಲೆಗಳು GTGSP (ಗೋಬರ್ ಟೈಮ್ಸ್ ಗ್ಲೋಬಲ್ ಸ್ಕೂಲ್ಸ್ ಪ್ರೋಗ್ರಾಂ) ನೆಟ್‌ವರ್ಕ್‌ನ ಒಂದು ಭಾಗವಾಗಿವೆ. ಸಿಎಸ್‌ಇ ಯು ಆಂಧ್ರಪ್ರದೇಶ, ಹಿಮಾಚಲ ಪ್ರದೇಶ, ದೆಹಲಿ, ಪಂಜಾಬ್, ಮಧ್ಯಪ್ರದೇಶ, ಕೇರಳ, ಸಿಕ್ಕಿಂ ಮತ್ತು ಉತ್ತರಾಖಂಡ ರಾಜ್ಯ ಸರ್ಕಾರಗಳೊಂದಿಗೆ ಔಪಚಾರಿಕ ಸಹಭಾಗಿತ್ವವನ್ನು ಹೊಂದಿದೆ. ಈ ಮೈತ್ರಿಯ ಪ್ರಕಾರ, ರಾಜ್ಯ ನೋಡಲ್ ಸಂಸ್ಥೆ 50-60 ಮಾಸ್ಟರ್ ತರಬೇತುದಾರರಿಗೆ ತರಬೇತಿ ನೀಡಲು ಸಿಎಸ್‌ಇಯನ್ನು ಆಹ್ವಾನಿಸುತ್ತದೆ. ಈ ಜಿಎಸ್ ಪಿ ತರಬೇತಿ ಪಡೆದ ಸಿಬ್ಬಂದಿಗಳು ನಂತರ ಜಿಲ್ಲಾ ಮತ್ತು ಬ್ಲಾಕ್ ಮಟ್ಟದಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಪರಿಸರ ಪರಿಶೋಧನೆ ನಡೆಸಲು ತರಬೇತಿ ನೀಡುತ್ತಾರೆ. ಈ ಹೆಚ್ಚಿನ ರಾಜ್ಯಗಳಲ್ಲಿ ಜಿಎಸ್ ಪಿ ಕೈಪಿಡಿಯನ್ನು ಪ್ರತಿ ಹಂತದ ಶಿಕ್ಷಕರು ಅದನ್ನು ಅತ್ಯುತ್ತಮವಾಗಿ ಬಳಸುವಂತೆ ನೋಡಿಕೊಳ್ಳಲು. ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಲಾಗಿದೆ, ಈ ಪ್ರಕ್ರಿಯೆಯು ಜಿಎಸ್ ಪಿ ಸಂದೇಶವನ್ನು ಈ ರಾಜ್ಯಗಳ ಪ್ರತಿಯೊಂದು ಮೂಲೆಗೂ ಕೊಂಡೊಯ್ಯಲು ಸಹಾಯ ಮಾಡಿದೆ. ದೂರದ ಪ್ರದೇಶಗಳಲ್ಲಿರುವ ಶಾಲೆಗಳ ಭಾಗವಹಿಸುವಿಕೆಯು ಪ್ರತಿವರ್ಷ ಹೆಚ್ಚುತ್ತಾ ಬರುತ್ತಿದೆ. ಇತರ ರಾಜ್ಯಗಳಲ್ಲಿ, ಜಿಎಸ್ ಪಿ ತಂಡವು ಸಣ್ಣ / ಸ್ಥಳೀಯ ಸರ್ಕಾರೇತರ ಸಂಸ್ಥೆಗಳು ಮತ್ತು ತಮ್ಮದೆ ಶಾಲೆಗಳ ಜಾಲವನ್ನು ಹೊಂದಿರುವ ಶಿಕ್ಷಣ ಸಂಸ್ಥೆಗಳಿಗೆ ತರಬೇತಿ ನೀಡುತ್ತದೆ. ಪಾಲುದಾರರಲ್ಲಿ, ದೆಹಲಿ, ಹಿಮಾಚಲ ಪ್ರದೇಶ, ಸಿಕ್ಕಿಂ ಮತ್ತು ಆಂಧ್ರಪ್ರದೇಶ - ನಾಲ್ಕು ರಾಜ್ಯಗಳು ಮುಖ್ಯಮಂತ್ರಿಯವರ ಜಿಎಸ್ ಪಿ ಪ್ರಶಸ್ತಿಗಳನ್ನು ರಚಿಸಿವೆ, ಇವುಗಳನ್ನು ರಾಜ್ಯದಲ್ಲಿ ಅತ್ಯುನ್ನತ ಸಾಧನೆ ಮಾಡಿದವರಿಗೆ ನೀಡಲಾಗುತ್ತದೆ. ಭಾಗವಹಿಸುವವರಿಗೆ ಮನ್ನಣೆ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದನ್ನು ಪ್ರೇರೇಪಿಸುವುದು ಮತ್ತು ರಾಜ್ಯ ಏಜೆನ್ಸಿಗಳು ದೀರ್ಘಾವಧಿಯ ಯೋಜನೆಯೊಂದಿಗೆ ಈ ಉಪಕ್ರಮದಲ್ಲಿ ಸಕ್ರಿಯವಾಗಿ ಭಾಗಿಯಾಗಿರುವುದನ್ನು ಖಚಿತಪಡಿಸಿಕೊಳ್ಳುವುದು ಇದರ ಉದ್ದೇಶ. ಜಿಎಸ್ ಪಿ ಯನ್ನು ಶ್ರೀಲಂಕಾ ಮತ್ತು ಯುಎಇ ಸರ್ಕಾರಗಳು ತಮ್ಮ ರಾಷ್ಟ್ರೀಯ ಪರಿಸರ ಪಠ್ಯಕ್ರಮದ ಭಾಗವಾಗಿ ಅಳವಡಿಸಿಕೊಂಡಿವೆ.*

ಕಳಪೆಯಾಗಿಸಬಾರದು. ಪರಿಸರ ಅಧ್ಯಯನವನ್ನು 'ಮಾಡಿ ಕಲಿಯುವ' ಸಾಧನವಾಗಿ ಹಸಿರು ಶಾಲೆಕಾರ್ಯಕ್ರಮವನ್ನು (ಜಿಎಸ್‌ಪಿ) ವಿನ್ಯಾಸಗೊಳಿಸಲಾಗಿದೆ. ಇದು ವಿದ್ಯಾರ್ಥಿಗಳನ್ನು ಮತ್ತು ಅಧ್ಯಾಪಕರನ್ನು ತರಗತಿಗಳಿಂದ ಹೊರಗೆ ಬಂದು – ಎಣಿಸಲು, ತೂಕ ಮಾಡಲು, ಅಳತೆ ಮಾಡಲು, ಶೋಧ ನಡೆಸಲು ಮತ್ತು ವಿಶ್ಲೇಷಣೆ ಮಾಡಲು ಪ್ರೋತ್ಸಾಹಿಸುತ್ತದೆ.

ಜಿಎಸ್‌ಪಿ ಕೈಪಿಡಿಯ ಜತೆಗೆ ನೀವೇ ಮಾಡಿ ನೋಡಿ ಎಂಬ ಪುಸ್ತಿಕೆ ಕೂಡ ಇದ್ದು ಅದು ಶಾಲಾ ಪರಿಸರದಲ್ಲಿನ ನೀರು, ಗಾಳಿ, ಶಕ್ತಿ, ತ್ಯಾಜ್ಯ ಮತ್ತು ಭೂಮಿಗಳ ಗುಣ ಪರಿಶೋಧನೆಯನ್ನು ಹೇಗೆ ಮಾಡಬೇಕೆನ್ನುವುದನ್ನು ಹೇಳಿಕೊಡುತ್ತದೆ. ಈ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ ಮಾಡುವವರಾಗಿ ಶಾಲಾ ಸಮುದಾಯದ ಕಾರ್ಯಕ್ಷಮತೆಯನ್ನು ನಿರ್ಣಯಿಸಲು ಜಿಎಸ್‌ಪಿ ಹೊಸ ವಿಧಾನವನ್ನು ಪರಿಚಯಿಸುತ್ತದೆ. ಇದರ ಅಂತಿಮ ಉತ್ಪನ್ನ ಎಂದರೆ ಇದರ ಪ್ರಗತಿಪತ್ರ. ಈ ಪತ್ರವನ್ನು ತಯಾರಿಸಲು, ತನ್ನದೇ ಸಾಧನೆಗಳನ್ನು ಪರಿಮಾಣವಾಗಿ ಅಳತೆಮಾಡಲು, ಜಾಗೃತಿ ಮತ್ತು ಕಾಳಜಿ ಅಗತ್ಯವಿರುವ ಕೊರತೆಗಳನ್ನು ಪತ್ತೆಹಚ್ಚಲು ಸಿಎಸ್‌ಇ ಶಾಲಾ ಸಮುದಾಯಗಳಿಗೆ ನೆರವು ನೀಡುತ್ತದೆ. ಈ ಪರಿಶೋಧನೆಗೆ ಯಾವುದೇ ವಿಶೇಷ ಸಲಕರಣೆಗಳೋ, ನಿಧಿಗಳೋ ಬೇಕಾಗಿಲ್ಲ. ಶಾಲಾ ದಿನಚರಿಯ ಭಾಗವಾಗಿಯೇ ಇರುವ ಸರಳ ತಂತ್ರಗಳನ್ನು ಬಳಸಿ ಹೇಗೆ ದತ್ತಾಂಶಗಳನ್ನು ಕಲೆಹಾಕಬೇಕು ಎನ್ನುವುದನ್ನು ಸಿಎಸ್‌ಇ ಶಾಲೆಗಳಿಗೆ ಹೇಳಿಕೊಡುತ್ತದೆ. ಮುಖ್ಯಧಾರೆಯ ಪಠ್ಯಕ್ರಮದ ಯಾವುದೇ ವಿಷಯಗಳಲ್ಲಿನ ನೇಮಿತಕಾರ್ಯಗಳಿಗೆ (assignment) ಇಲ್ಲಿನ ಚಟುವಟಿಕೆಗಳನ್ನೇ ಬಳಸಬಹುದಾಗಿದೆ.

ಈ ಪ್ರಕ್ರಿಯೆಗಳ ಮೂಲಕ ಜಿಎಸ್‌ಪಿ "ಪರಿಸರ" ಎನ್ನುವುದರ ಅರ್ಥ ಕೇವಲ ಮರಗಳು, ಹಕ್ಕಿಗಳು ಮತ್ತು ಹುಲಿಗಳಿಗೆ ಸೀಮಿತವಲ್ಲ ಎಂಬ ಸಂದೇಶವನ್ನು ಮನಗಾಣಿಸಲು ಪ್ರಯತ್ನಿಸುತ್ತದೆ. ಅದು ಮನುಷ್ಯನ ಜೀವನ ಮತ್ತು ಜೀವನೋಪಾಯಕ್ಕೆ ಬೇಕಾದ ಮುಖ್ಯ ಘಟಕಗಳನ್ನೆಲ್ಲ ಒಳಗೊಂಡಿರುತ್ತದೆ. ಇದರ ಅಂತಿಮ ಉತ್ಪನ್ನ ಎಂದರೆ ಇದರ ಪ್ರಗತಿಪತ್ರ. ಈ ಪತ್ರವನ್ನು ತಯಾರಿಸಲು, ತನ್ನದೇ ಸಾಧನೆಗಳನ್ನು ಪರಿಮಾಣವಾಗಿ ಅಳತೆಮಾಡಲು, ಜಾಗೃತಿ ಮತ್ತು ಕಾಳಜಿ ಅಗತ್ಯವಿರುವ ಕೊರತೆಗಳನ್ನು ಪತ್ತೆಹಚ್ಚಲು ಸಿಎಸ್‌ಇ ಶಾಲಾ ಸಮುದಾಯಗಳಿಗೆ ನೆರವು ನೀಡುತ್ತದೆ.

ಒಟ್ಟಿನಲ್ಲಿ, ಸಿಎಸ್‌ಇ ಪ್ರತಿವರ್ಷವೂ ಗೋಬರ್ ಟೈಮ್ಸ್ ಹಸಿರು ಶಾಲೆ ಕಾರ್ಯಕ್ರಮ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸುತ್ತದೆ. ದೇಶದ ನಾನಾ ಕಡೆಗಳಿಂದ ಅತ್ಯುತ್ತಮ ಕಾರ್ಯಪ್ರಗತಿ ತೋರಿದವರಿಗೆ ಅವರ ಉದ್ಯಮಶೀಲತೆ ಮತ್ತು ಹೊಸತನದ ಕೌಶಲ್ಯಗಳಿಗಾಗಿ ಪುರಸ್ಕಾರ ನೀಡಲಾಗುತ್ತದೆ. ಪ್ರಯತ್ನಗಳಿಗೆ ಮನ್ನಣೆ ನೀಡುವುದು ಅದೇ ರೀತಿ ಇನ್ನೂ ಹೆಚ್ಚಿನ ಸಂಸ್ಥೆಗಳು ಮುಂದೆ ಬಂದು ಈ ಚಳವಳಿಯಲ್ಲಿ ಭಾಗವಹಿಸುವಂತೆ ಉತ್ತೇಜನ ನೀಡುವುದು ಕೂಡ ಇಲ್ಲಿನ ಮುಖ್ಯ ಉದ್ದೇಶ. ಆ ದಿನವನ್ನು ಉತ್ಸವದಂತೆ ಆಚರಿಸಲಾಗುತ್ತದೆ. ಭಾರತದ ಪ್ರತಿಯೊಂದು ಭಾಗದಿಂದ ವಿದ್ಯಾರ್ಥಿಗಳನ್ನು ಆಹ್ವಾನಿಸಲಾಗುತ್ತದೆ. ಬಂದ ವಿದ್ಯಾರ್ಥಿಗಳು ಪ್ರಶಸ್ತಿ ಪ್ರದಾನ ಸಮಾರಂಭವನ್ನು ವೀಕ್ಷಿಸುವುದು ಮಾತ್ರವಲ್ಲ ಪೇಂಟಿಂಗ್ ಸ್ಪರ್ಧೆಗಳಲ್ಲಿ, ಬೀದಿ ನಾಟಕಗಳಲ್ಲಿ ಭಾಗವಹಿಸುತ್ತಾರೆ, ಚಲನಚಿತ್ರಗಳನ್ನು ನೋಡುತ್ತಾರೆ, ಪ್ರತಿಯೊಬ್ಬರ ಜತೆಗೆ ಬೆರೆಯುತ್ತಾರೆ. ಪ್ರತಿ ವರ್ಷವೂ 20 ಅತ್ಯುತ್ತಮ ಶಾಲೆಗಳ ಪೈಕಿ 5 ರಿಂದ 8 ಶಾಲೆಗಳು ಗ್ರಾಮೀಣ ಪ್ರದೇಶದವುಗಳೇ ಆಗಿರುತ್ತವೆ.

## ಆದರೆ ಜಿ ಎಸ್ ಪಿ ಪರಿಣಾಮಕಾರಿಯಾಗಿದೆಯೇ?

ಭಾಗವಹಿಸುತ್ತಿರುವ ಶಾಲೆಗಳ ಪ್ರಗತಿಯನ್ನು ಪ್ರತಿ ಶೈಕ್ಷಣಿಕ ವರ್ಷ ಹೋಲಿಸುತ್ತಾ ಹೋದರೆ ಶಾಲಾ ಸಮುದಾಯದ ಮೇಲೆ ಜಿಎಸ್‌ಪಿಯ ಪ್ರಭಾವ ದೃಷ್ಟಿಗೋಚರವಾಗುತ್ತದೆ. ಇಲ್ಲಿ ಗಮನಿಸಬೇಕಾದದ್ದೇನೆಂದರೆ ಶೇಕಡಾ 50ಕ್ಕಿಂತ ಹೆಚ್ಚು ಶಾಲೆಗಳು ವರ್ಷದಿಂದ ವರ್ಷಕ್ಕೆ (ಆಡಿಟ್) ಪರಿಶೋಧನೆ ಪ್ರಕ್ರಿಯೆಯನ್ನು ಮತ್ತೆ ಮತ್ತೆ ಮಾಡುತ್ತಲೇ ಇವೆ. ಅವರ ಉದ್ದೇಶ ಕೇವಲ ಸ್ಪರ್ಧೆಯಲ್ಲಿ ಗೆಲ್ಲುವುದು ಮಾತ್ರ ಅಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಅವರಿಗೆ ತಮ್ಮ ಪ್ರಗತಿ ಪತ್ರವನ್ನು ಇನ್ನೂ ಚೆನ್ನಾಗಿಸಿದ್ದೇವೆಯೇ ಎನ್ನುವುದನ್ನು ಅಳೆಯುವುದು ಮತ್ತು ಪರಿಸರದ ಇನ್ನೂ ಉತ್ತಮ ನಿರ್ವಾಹಕರಾಗುವುದು ಮುಖ್ಯ.

## ಬದಲಾಗುತ್ತಿರುವ ಪ್ರವೃತ್ತಿಗಳು ಮತ್ತು ದೃಷ್ಟಿಕೋನ

2006ರಲ್ಲಿ, ಮೊದಲ ಪರಿಶೋಧನಾ ವರದಿಗಳ ಸಂಗ್ರಹವನ್ನು ಸಲ್ಲಿಸಿದ ಮತ್ತು ವಿಶ್ಲೇಷಿಸಿದ ನಂತರ, ಸಿಎಸ್‌ಇ ಈ ಕೆಳಗಿನ ಪ್ರವೃತ್ತಿಗಳನ್ನು ಗುರುತಿಸಿದೆ :

- ಪರಿಸರ ಸಂಬಂಧಿ ಚಟುವಟಿಕೆಗಳನ್ನು ಇನ್ನೂ ಪಠ್ಯೇತರ ಚಟುವಟಿಕೆ ಎಂದೇ ಪರಿಗಣಿಸಲಾಗುತ್ತಿದೆ. ಜೀವನಶೈಲಿಯಲ್ಲಿ ಅಥವಾ ಆಚರಣೆಯಲ್ಲಿ ನಿಜವಾದ ಬದಲಾವಣೆಗಳನ್ನು ತರಲು ಬೇಕಾದ ಯಾವುದೇ ಯೋಜಿತ ಉಪಕ್ರಮಗಳು ಕಂಡುಬಂದಿಲ್ಲ.
- ವಿದ್ಯುತ್ ಮತ್ತು ನೀರನ್ನು ಉಳಿಸುವ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳಲು ಶಾಲೆಗಳು ತಯಾರಾಗಿಯೇ ಇವೆ. ಪ್ರಭಾವಗಳನ್ನು ಅಳತೆ ಮಾಡಲು ಮತ್ತು ಪರಿಮಾಣಗೊಳಿಸಲು ಅನುಪಾಲನಾ ಪ್ರಕ್ರಿಯೆ ಇರುವುದಿಲ್ಲ.

ಉದಾಹರಣೆಗೆ, ಭಾಗವಹಿಸಿದ ಶೇಕಡಾ 75 ಶಾಲೆಗಳು ಮಳೆನೀರು ಕೊಯ್ಲಿನ ವ್ಯವಸ್ಥೆಯನ್ನು ಸ್ಥಾಪಿಸಿಕೊಂಡಿವೆ. ಆದರೆ ಅದರಲ್ಲಿ ಒಂದು ಮಾತ್ರ ಅದರ ವಾಸ್ತವ

ಸಾಮರ್ಥ್ಯವನ್ನು ಬಳಸಿಕೊಳ್ಳುತ್ತಿದೆ. ಉಳಿದ ಶಾಲೆಗಳಿಗೆ ಅವು ಕೇವಲ ಶೋಕೇಸ್ ಮಾದರಿಗಳೇ ಆಗಿವೆ–ಸ್ಥಾಪಿಸಿ ನಂತರ ಮರೆತುಬಿಟ್ಟ ವಸ್ತು ಆಗಿವೆ. ಶೇಕಡಾ 95 ಶಾಲೆಗಳು ಎರೆಹುಳ ಗೊಬ್ಬರ ತಯಾರಿಕೆ, ಕಾಗದ ಮರುಬಳಕೆ ಮುಂತಾದ ತ್ಯಾಜ್ಯನಿರ್ವಹಣೆಯ ಆಚರಣೆಗಳಲ್ಲಿ ನಿರತವಾಗಿವೆ. ಆದರೆ ಕೇವಲ 5 ಶಾಲೆಗಳು ಮಾತ್ರ ತಮ್ಮ ಪರಿಸರದಲ್ಲಿ ತಲಾ ಎಷ್ಟು ತ್ಯಾಜ್ಯ ಉತ್ಪಾದನೆ ಆಗುತ್ತದೆ ಎಂದು ದಾಖಲಿಸಲು ಸಮರ್ಥವಾಗಿವೆ.

2007ರಲ್ಲಿ ಈ ಕೆಳಗಿನ ಕ್ಷೇತ್ರಗಳಲ್ಲಿನ ಧೋರಣೆ ಮತ್ತು ದೃಷ್ಟಿಕೋನಗಳಲ್ಲಿ ಮಹತ್ವದ ಬದಲಾವಣೆಗಳಾಗಿವೆ:

- ಒಂದು ವರ್ಷದೊಳಗೆ ಪರಿಶೋಧನೆ ಕಲೆಯನ್ನು ಶಾಲೆಗಳು ಕರಗತ ಮಾಡಿಕೊಂಡಿದ್ದವು.
- ಅವುಗಳ ದತ್ತಾಂಶ ಸಂಗ್ರಹ, ಕೋಷ್ಟಕ ತಯಾರಿ ಮತ್ತು ವಿಶ್ಲೇಷಣೆಗಳೆಲ್ಲ ಅದ್ಭುತವಾಗಿತ್ತು.
- ಮಳೆನೀರು ಕೊಯ್ಲು, ನೀರು ಮತ್ತು ತ್ಯಾಜ್ಯದ ಮರುಬಳಕೆಯಂತಹ ಸಂಪನ್ಮೂಲ ನಿರ್ವಹಣೆ ಅಭ್ಯಾಸಗಳ ಪರಿಣಾಮದ ನಿರ್ಧರಣೆ ಹೆಚ್ಚು ನಿಖರ, ಯೋಜಿತ, ಪರಿಪೂರ್ಣವಾಗಿದ್ದವು.
- ಪ್ರತಿಯೊಂದು ಹಂತದಲ್ಲೂ ವಿದ್ಯಾರ್ಥಿಗಳು ಭಾಗಿಯಾಗಿದ್ದುದು ಕಂಡುಬರುತ್ತಿತ್ತು. ಜಾಗೃತಿ ಮಟ್ಟದಲ್ಲಿ ತೀವ್ರ ಏರಿಕೆ ಕಾಣಿಸಿತು.

ಉದಾಹರಣೆಗೆ, ಪ್ರತಿಯೊಂದು ಶಾಲೆ ತ್ಯಾಜ್ಯವನ್ನು ತೂಕ ಮಾಡಲು ವಿದ್ಯಾರ್ಥಿ ಗುಂಪುಗಳನ್ನು ನೇಮಕ ಮಾಡಿತ್ತು. ಪರಿಶೋಧನೆ ತಂಡದಲ್ಲಿ ಗುಡಿಸುವವರು, ಉದ್ಯಾನದ ಮಾಲಿಗಳು, ತ್ಯಾಜ್ಯ ವ್ಯಾಪಾರಿಗಳು ಒಳಗೊಂಡಿದ್ದರು. ವಿದ್ಯಾರ್ಥಿಗಳು ಸ್ಪ್ರಿಂಗ್ ತಕ್ಕಡಿ, ಕೈತಕ್ಕಡಿ ಮತ್ತು ತೂಕದ ಯಂತ್ರಗಳನ್ನು ಬಳಸುತ್ತಿದ್ದರು. ಹಾಗಾಗಿ ಪ್ರತಿದಿನ ಯಾವ ಬಗೆಯ ತ್ಯಾಜ್ಯ ಎಷ್ಟು ಉತ್ಪಾದನೆ ಆಗುತ್ತಿದೆ ಎಂದು ಸಿಎಸ್ಇಗೆ ತಿಳಿಸಬಲ್ಲವರಾಗಿದ್ದರು.

2008ರಲ್ಲಿ, ಪಾಲ್ಗೊಂಡವರ ಬದ್ಧತೆ ಮತ್ತು ಪಟ್ಟುಹಿಡಿದು ಕೆಲಸ ಮಾಡುವ ಶಕ್ತಿಗಳು ಸಿಎಸ್ಇ ಹೊಸದಾದ 'ಚೇಂಜ್ ಮೇಕರ್ಸ್' ಎಂಬ ಪುರಸ್ಕಾರವನ್ನು ಶುರು ಮಾಡಲು ಉತ್ತೇಜಿಸಿತು. ಇದು ಶಾಲಾ ಸಮುದಾಯ ಮಾತ್ರವಲ್ಲದೆ ಹೆತ್ತವರಲ್ಲಿ ಮತ್ತು ನೆರೆಹೊರೆಯವರಲ್ಲಿ ಅವರ ಜೀವನ ವಿಧಾನ ಮತ್ತು ಮನಸ್ಥಿತಿಯಲ್ಲಿ ಮೂಲಭೂತ ದೀರ್ಘಕಾಲಿಕ ಬದಲಾವಣೆ ತರುವಲ್ಲಿ ಯಶಸ್ವಿಯಾದ ಶಾಲೆಯವರಿಗೆ ನೀಡುವ ಬಹುಮಾನ. ಉದಾಹರಣೆಗೆ ದಕ್ಷಿಣ ದೆಹಲಿಯ ಶಾಲೆಯೊಂದು ಪ್ರಯಾಣಿಕರ ಪ್ರಯಾಣ ಅಭ್ಯಾಸಗಳಲ್ಲಿ ಶೇಕಡಾ 8ರಷ್ಟು ಬದಲಾವಣೆ ತಂದಿತ್ತು. ಸ್ವಂತ ಕಾರುಗಳು ಮತ್ತು ದ್ವಿಚಕ್ರವಾಹನಗಳ ಬದಲಾಗಿ ಆ ಶಾಲೆಯ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಸಾರ್ವಜನಿಕ ಸಾರಿಗೆ (ಕೆಲವನ್ನು ಶಾಲೆಯೇ ನೀಡಿತ್ತು) ಆಯ್ಕೆ ಮಾಡುವಂತೆ ಮಾಡುವ ಮೂಲಕ ಈ ಬದಲಾವಣೆಗೆ ಕಾರಣರಾದರು. ಹೆತ್ತವರೂ ಈ ನಿರ್ಧಾರದಲ್ಲಿ ಭಾಗವಹಿಸಿದರು. ಈ ಆಂದೋಲನದ ಭಾಗವಾದರು.

ಅಲ್ಲಿಂದ ನಂತರ ಈ ಪರಿಶೋಧನಾ ಪ್ರಕ್ರಿಯೆಯು ಸಂಪನ್ಮೂಲಗಳ ಸ್ಥಿತಿಗತಿ ಬಗ್ಗೆ ಅಧಿಕೃತ ದತ್ತಾಂಶ ಕಲೆಹಾಕಲು ಮತ್ತು ಪ್ರವೃತ್ತಿಗಳನ್ನು ಗುರುತಿಸಲು ಬಲು ಸಮರ್ಥ ಮಾಧ್ಯಮವಾಗಿ ಪಕ್ವವಾಯಿತು. ಇದು ಏನು ಮಾಡಬೇಕಾದ ಅಗತ್ಯವಿದೆ ಎಲ್ಲಿ ಮತ್ತು ಹೇಗೆ ಮಾಡಬೇಕೆನ್ನುವುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಹೀಗಾಗಿ ನಿರ್ದಿಷ್ಟ ವ್ಯವಸ್ಥೆ ಅಥವಾ ಕಾರ್ಯ ನೀತಿ ಫಲದಾಯಕವೇ ಇಲ್ಲವೇ ಎಂದು ಅಳೆಯಲು ಆಡಳಿತಗಾರರು ಇದನ್ನು ಈಗ ಬಳಸಿಕೊಳ್ಳಬಹುದಾಗಿದೆ.

ಉದಾಹರಣೆಗೆ, ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್ (ಸಿಎನ್‌ಜಿ)ನಿಂದ ಓಡುವ ವಾಹನಗಳ ಕಾರಣದಿಂದ ದೆಹಲಿ ಶಾಲೆಗಳು ಇಂಧನ ಪರಿಶೋಧನೆಯಲ್ಲಿ ಬಹಳ ಲಾಭ ಸಾಧಿಸಿವೆ. ಈ ಯೋಜನೆಯು ಉಳಿದ ರಾಜ್ಯಗಳಿಗೆ ಹೋಲಿಸಿದರೆ ಹೊಗೆ ಮಾಲಿನ್ಯವನ್ನು ಕನಿಷ್ಠ ಮಟ್ಟದಲ್ಲಿ ಇರಿಸಿಕೊಳ್ಳಲು ದೆಹಲಿ ಶಾಲೆಗಳಿಗೆ ಸಹಾಯ ಮಾಡಿದೆ. ಹೀಗಿದ್ದರೂ ಡೀಸೆಲ್‌ನಿಂದ ನಡೆಯುವ ಜನರೇಟರ್‌ಗಳನ್ನು ಹೆಚ್ಚು ಹೆಚ್ಚು ಅವಲಂಬಿಸುತ್ತಿರುವ ಕಾರಣದಿಂದ ಅವರ ಅಂಕಗಳು ಕೆಲವೊಮ್ಮೆ ಕೆಳಕ್ಕೆ ಇಳಿಯುತ್ತಿವೆ. ಇದು ನಗರದ ವಿದ್ಯುತ್ತಿನ ಪರಿಸ್ಥಿತಿಯನ್ನು ಬಿಂಬಿಸುತ್ತದೆ.

**ಜಿಎಸ್‌ಪಿ ಏಕೆ ಬೇಕು?**

ಈ ಪರಿಶೋಧನೆಯು ಎಲ್ಲೆಡೆ ಅಗತ್ಯ ಎನ್ನುವುದು ಈಗ ಸಾಬೀತಾಗಿದೆ. ಮುಖ್ಯವಾಗಿ ಸಂಪನ್ಮೂಲಗಳೇ ಅಪರೂಪವಾಗಿರುವ ಶಾಲೆಗಳಿಗಂತೂ ಇದು ಅತ್ಯಗತ್ಯ. ಮೂಲ ಅಗತ್ಯಗಳನ್ನು ಒದಗಿಸಲಾಗಿದೆ ಎಂದು ಖಚಿತಪಡಿಸುವುದಕ್ಕೆ ಇದು ಅಗತ್ಯ. ವಿಪರೀತ ಬಳಕೆ ಇರುವ ಶಾಲೆಗಳಲ್ಲಿ ಅನಗತ್ಯ ಪೋಲು ತಡೆಯಲು ಇಂತಹ ಪರಿಶೋಧನೆ ಅಗತ್ಯ.

ಹೀಗಾಗಿ ಜಿಎಸ್‌ಪಿಯನ್ನು ಶಾಲಾ ಆಡಳಿತಗಾರರು ಎರಡು ಉದ್ದೇಶಸಾಧನೆಗೆ ಉಪಕರಣದಂತೆ ಬಳಸಿಕೊಳ್ಳಬಹುದಾಗಿದೆ. ಮೊದಲನೆಯದ್ದು ದೆಹಲಿಯ ಶಾಲೆಗಳಿಗೆ ವಾಸ್ತವಿಕ ಮತ್ತು ಕಾರ್ಯಸಾಧ್ಯವಾದ 'ಹಸಿರು ನಿಯಮ'ಗಳನ್ನು ರೂಪಿಸುವುದಕ್ಕೆ; ನಂತರ ಮತ್ತೂ ಒಂದು ಹೆಜ್ಜೆ ಮುಂದುವರೆದು ಈ ನಿಯಮಗಳನ್ನು ಶಾಲೆಗಳಲ್ಲಿ ಈ ಹಸಿರು ಕಾರ್ಯನೀತಿಗಳು ಮತ್ತು ಮೂಲಸೌಕರ್ಯಗಳ ರೂಪದಲ್ಲಿ ಜಾರಿಗೆ ತರುವುದಕ್ಕೆ ಬಳಸಬಹುದಾಗಿದೆ.

### ಆದರೆ ನಿಜವಾಗಿಯೂ ಶಾಲೆಗಳು ತಳಮಟ್ಟದಲ್ಲಿ ಇದನ್ನು ಮಾಡುತ್ತಿವೆಯೇ?

ಇದಕ್ಕೆ ಉತ್ತರಿಸಬೇಕಿದ್ದರೆ ನಾನು ಇಲ್ಲೊಂದು ಪತ್ರವನ್ನು ನಿಮ್ಮ ಜತೆಗೆ ಹಂಚಿಕೊಳ್ಳಬೇಕಾಗಿದೆ. ನಮ್ಮ ಖ್ಯಾತ ಶಾಲಾ ಪಾಲುದಾರರಿಂದ ಇತ್ತೀಚೆಗೆ ಬಂದ ಪತ್ರ. ಅದರಲ್ಲಿ ಹೇಳುತ್ತಾರೆ, 'ನಿಮಗೆ ಗೊತ್ತಿರುವ ಹಾಗೆ, ನಮ್ಮ ಶಾಲೆ ದಕ್ಷಿಣ ದೆಹಲಿಯ ಅತ್ಯಂತ ನೀರಿನ ಕೊರತೆಯಿರುವ ಪ್ರದೇಶದಲ್ಲಿ ಇದೆ. ಪ್ರತಿ ಬೇಸಗೆಯಲ್ಲೂ ವಾಣಿಜ್ಯ ದರದಲ್ಲಿ ನೀರನ್ನು ಖರೀದಿಸುವುದಕ್ಕಾಗಿ ನಾವು ಭಾರೀ ಹಣವನ್ನು ತೆರದೇ ಗತ್ಯಂತರವಿಲ್ಲ. ಸಿಎಸ್‌ಇಯ ಶಾಲಾ ಕಾರ್ಯಕ್ರಮಗಳ ಪರಿಚಯ ಆದ ನಂತರ, ನಾವು ನಮ್ಮ ನೀರಿನ ಬಳಕೆಯನ್ನು ಕಡಿಮೆ ಮಾಡುವುದಕ್ಕೆ ನಿರ್ಧರಿಸಿದೆವು. ನಾವು ಇದನ್ನು ಮಾಡುವುದಕ್ಕಾಗಿ ದಾರಿಯನ್ನು ಕೊನೆಗೂ ಕಂಡುಕೊಂಡೆವು. ನಾವು ಹುಡುಗರ ಎಲ್ಲಾ 18 ಶೌಚಾಲಯಗಳನ್ನು ನೀರು ರಹಿತ ಘಟಕಗಳಾಗಿ ಪರಿವರ್ತಿಸಿದೆವು. ಈ ಒಂದು ಕ್ರಮದಿಂದ 1,70,000 ಲೀಟರ್ ಶುದ್ಧ ನೀರನ್ನು ಪ್ರತಿವರ್ಷ ಉಳಿಸುವುದು ಸಾಧ್ಯವಾಯಿತು. ಪ್ರತಿ ಯೂನಿಟ್‌ಗೆ 2500 ರೂಪಾಯಿ ಖರ್ಚುಆಯಿತು. ಉಳಿಸಿದ ನೀರನ್ನು ಲೆಕ್ಕ ಹಾಕಿದರೆ ಮೊದಲ ತಿಂಗಳಲ್ಲಿ ಈ ಘಟಕ ಸ್ಥಾಪನೆಯ ಹಣ ವಾಪಸ್ ಬಂದು ಬಿಟ್ಟಿತು.'

ಈ ಜಿಎಸ್‌ಪಿ ಗುರುಗಳು ತುಂಬಾ ಪೋಲುಮಾಡುತ್ತಿದ್ದ, ತಪ್ಪಿತಸ್ಥ ಮನಸ್ಥಿತಿಯ ಬಳಕೆದಾರರಾಗಿದ್ದವರು, ಈಗ ಜಾಣರೂ ಸಂಪನ್ಮೂಲವನ್ನು ಎಚ್ಚರಿಕೆಯಿಂದ ನಿರ್ವಹಿಸುವವರಾಗಿ ಬಲು ಪ್ರಗತಿಸಾಧಿಸಿದ್ದಾರೆ! ಇದು ನಿಜಕ್ಕೂ ಹಾರ್ದಿಕವಾದ ಬೆಳವಣಿಗೆ. ಜಾಗತಿಕ ನೆಲೆಯಲ್ಲಿ, ಪರಿಸರ ರಕ್ಷಣೆಯು ಕೇಂದ್ರ ಸ್ಥಾನವನ್ನು ಪಡೆದುಕೊಂಡಿದೆ. ಅರ್ಥವ್ಯವಸ್ಥೆಯ ರೂಪಣೆಯಲ್ಲಿ, ಕಾರ್ಯನೀತಿಯ ಮೇಲೆ ಪ್ರಭಾವ ಬೀರುವಲ್ಲಿ, ರಾಜ್ಯಗಳ ಮುಖ್ಯಸ್ಥರ ಅದೃಷ್ಟ ನಿರ್ಧರಿಸುವಲ್ಲಿ ಇದು ಮುಖ್ಯಪಾತ್ರವಹಿಸುತ್ತಿದೆ. ಆಂತರಿಕವಾಗಿ ಕೈಗಾರಿಕೆಯಿಂದ ಕೃಷಿವರೆಗೆ, ಪ್ರತಿಯೊಂದು ಕ್ಷೇತ್ರದ ಕಾರ್ಯಸೂಚಿಯಲ್ಲಿ ಇದು ಆದ್ಯತೆಯ ವಿಷಯವಾಗಿದೆ. ಹಾಗಾಗಿ ನಮ್ಮ ಜನಸಂಖ್ಯೆಯ ಅತ್ಯಂತ ಮುಖ್ಯ ಭಾಗವಾಗಿರುವ ವಿದ್ಯಾರ್ಥಿಗಳನ್ನು ಈ ಸಂವಾದದಲ್ಲಿ ಸೇರಿಸಿಕೊಳ್ಳಲು ಇದು ಸಕಾಲ. ಇಲ್ಲಿ ನಮಗೆ ಈ ವಿಚಾರಗಳಿಗೆ ಸಂಬಂಧಿಸಿದಂತೆ ಅವರ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು, ಅವರ ಜ್ಞಾನದ ನೆಲೆಗಟ್ಟನ್ನು ಇನ್ನಷ್ಟು ಆಳಕ್ಕಿಳಿಸುವುದು ಜರೂರಿನ ವಿಚಾರ. ಜಿಎಸ್‌ಪಿಯಂತಹ ಕಾರ್ಯಕ್ರಮಗಳು ಅವರಿಗೆ ಅವರ ಅಭಿಪ್ರಾಯಗಳನ್ನು ಅಭಿವ್ಯಕ್ತಪಡಿಸುವುದಕ್ಕೆ ವೇದಿಕೆ ಒದಗಿಸುತ್ತವೆ, ಜತೆಗೇ ಜನರ ನಡುವೆ ನಿಕಟವಾಗಿ ಪ್ರಯೋಗ ನಡೆಸುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತದೆ.

**ಸರಕಾರಿ ಹೆಣ್ಣುಮಕ್ಕಳ ಸೀನಿಯರ್ ಸೆಕೆಂಡರಿ ಶಾಲೆ, ದೇವೊರಾಲಿ, ಸಿಕ್ಕಿಂ:** ಇಡೀ ಜಿಎಸ್‌ಪಿ ಪರಿಶೋಧನೆಗೆ ಅವರು ಹೊಸ ಆಯಾಮವನ್ನು ತಂದುಕೊಟ್ಟಿದ್ದಾರೆ. ಅವರು ಅದನ್ನು ಆರೋಗ್ಯದೊಂದಿಗೆ ಜೋಡಿಸಿದ್ದಾರೆ. ಉತ್ತರ ಸಿಕ್ಕಿಂನ ಎತ್ತರದ ಬೆಟ್ಟದಲ್ಲಿ ಇರುವ ಈ ಪುಟ್ಟಶಾಲೆಯ ಹೆಣ್ಣುಮಕ್ಕಳು 2005ರ ವರೆಗೆ ಅತ್ಯಂತ ಕ್ರಿಯಾಶೀಲ ಹೆಲ್ತ್‌ಕ್ಲಬ್ ನಡೆಸುತ್ತಾ ಇದ್ದರು. ಜಿಎಸ್‌ಪಿ ಪರಿಚಯ ಆಗುವ ವರೆಗೆ ಅವರು ವಿದ್ಯಾರ್ಥಿಗಳಿಗೆ, ಶಾಲಾ ಸಿಬ್ಬಂದಿಗಳಿಗೆ ಪ್ರಥಮಚಿಕಿತ್ಸೆ ನೀಡುತ್ತಾ ಇದ್ದರು. ಸಾಮಾನ್ಯ ಸ್ವಚ್ಛತೆಯ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದರು. ಸಿಕ್ಕಿಂನ ಈ ಕ್ರಿಯಾಶೀಲ ನಾಗರಿಕರು ಶಾಲೆಯಲ್ಲಿ ಉತ್ಪಾದನೆಯಾದ ಘನತ್ಯಾಜ್ಯ ನಿರ್ವಹಣೆ, ಸ್ವಚ್ಛ ಹಾಗು ನೀರಿನ ಮಿತಬಳಕೆಯ ಶೌಚಾಲಯ ನಿರ್ವಹಿಸಿಕೊಂಡು ಬರುವುದು, ಸುರಕ್ಷಿತ ಕುಡಿಯುವ ನೀರು ಇವು ಉತ್ತಮ ಆರೋಗ್ಯಕ್ಕೆ ಬೇಕಾದ ಔಷಧ ಮತ್ತು ಬ್ಯಾಂಡ್ ಏಯ್ಡ್‌ಗಳಷ್ಟೇ ನಿರ್ಣಾಯಕ ವಿಚಾರಗಳು ಎಂದು ತಕ್ಷಣ ಕಂಡುಕೊಂಡರು. ಹೀಗಾಗಿ ಹೆಲ್ತ್ ಕ್ಲಬ್ ಪರಿಸರ ಚಟುವಟಿಕೆಗಳ ಕೇಂದ್ರಬಿಂದುವಾಯಿತು. ಶಾಲೆ ಇನ್ನಷ್ಟು ಆರೋಗ್ಯಪೂರ್ಣವಾಯಿತು!

**ಸರಕಾರಿ ಸೀನಿಯರ್ ಸೆಕೆಂಡರಿ ಶಾಲೆ, ಮಕರೇರಿ, ಹಿಮಾಚಲ ಪ್ರದೇಶ:** ಇದು ಪರ್ವತ ಪ್ರದೇಶಗಳ ಇನ್ನೊಂದು ಸಹಭಾಗಿ ಸಂಸ್ಥೆ. ಇದು ಹಿಮಾಚಲ ಪ್ರದೇಶದ ಶಾಲೆ. ಇದು ಇನ್ನೂ ಜನವಿದೂರ ಪ್ರದೇಶದಲ್ಲಿತ್ತು. ಹಳ್ಳಿಮೂಲೆಯಲ್ಲಿ ನೆಲೆಗೊಂಡಿದ್ದರೂ, ಸನಿಹದ ಜಿಲ್ಲಾ ಕೇಂದ್ರದಿಂದ 75 ಕಿಲೋಮೀಟರ್ ದೂರದಲ್ಲಿದ್ದರೂ ಈ ಚೈತನ್ಯಶೀಲ ಶಾಲಾ ಸಮುದಾಯದ ಉತ್ಸಾಹ ಎಂದೂ ಕುಂದಲಿಲ್ಲ. ಸ್ಥಳೀಯ ಜೀವವೈವಿಧ್ಯವನ್ನು ಸಂರಕ್ಷಿಸುತ್ತಿರುವ ಕೆಲಸಕ್ಕಾಗಿ–ಸಾಂಪ್ರದಾಯಿಕ ಧಾನ್ಯಗಳ ಬೀಜ ಬ್ಯಾಂಕ್ ನಿರ್ವಹಿಸುತ್ತಿರುವುದಕ್ಕಾಗಿ, ಸ್ಥಳೀಯ ಸಸ್ಯ ಪ್ರಭೇದಗಳ ನೆಡು ಕಡ್ಡಿಗಳನ್ನು ಇರಿಸಿದ್ದಕ್ಕಾಗಿ ಇದು ಅನೇಕ ಪರಿಸರ ಪುರಸ್ಕಾರಗಳನ್ನು ಗೆದ್ದಿದೆ. ಅದಾಗಲೇ ಪರಿಸರವಿವೇಕಿಗಳಾದ ಈ ಜನರಿಗೆ ಜಿಎಸ್‌ಪಿ ತಿಳಿಸಿಕೊಟ್ಟದ್ದು ಏನೆಂದರೆ ಪರಿಸರ ಎಂದರೆ ಮರ, ಗಿಡ, ಪ್ರಾಣಿ ಮತ್ತು ಬೀಜಗಳಷ್ಟೇ ಅಲ್ಲ. ಅದು ನೀರು, ಇಂಧನ, ತ್ಯಾಜ್ಯ ಕುರಿತದ್ದೂ ಹೌದು ಎಂದು ನೆನಪಿಸಿದ್ದು. ಅದೂ ಕಿರುಜಲವಿದ್ಯುತ್ ಯೋಜನೆಗಳ ಕಡೆಗೆ ಗಮನ ಕೇಂದ್ರೀಕರಿಸಿದ ಹಿಮಾಚಲದಲ್ಲಿ ಮಳೆಕೊಯ್ಲನ್ನು ಅಭ್ಯಾಸ ಮಾಡುವುದು ಅಗತ್ಯವಾಗಿತ್ತು. ನದಿಗಳೆಲ್ಲ ಬತ್ತಿ ಹೋದ ಸಂದರ್ಭದಲ್ಲಿ ನೀರಿನ ಕೊರತೆ ನಿಭಾಯಿಸಲು ಇಂತಹ ಕ್ರಮ ಅನಿವಾರ್ಯವಾಗಿತ್ತು. ಅದನ್ನೊಮ್ಮೆ ನೆನಪಿಸಿದ ತರುವಾಯ ಅವರನ್ನು ತಡೆಯುವವರೇ ಇಲ್ಲ. ಪರಿಶೋಧನೆ (ಆಡಿಟ್) ತಂಡಗಳು ಸ್ಥಳೀಯ ಪಂಚಾಯತ್ ಜೊತೆ ಮಾತುಕತೆ ಸಂಧಾನ ನಡೆಸಿ, ಶಾಲೆಯಲ್ಲಿ ಮಾತ್ರ ಅಲ್ಲ ಗ್ರಾಮಗಳಲ್ಲಿ ಕೂಡ ಬೇಕಾದ ನಿರ್ಮಾಣಗಳು ಆಗುವಂತೆ ನೋಡಿಕೊಂಡವು

**ಜಿಎಸ್‌ಪಿಯ ಭವಿಷ್ಯದ ಕಾಣ್ಕೆ ಏನು?**

ಸಿಎಸ್‌ಇಯ ಉದ್ದೇಶವೆಂದರೆ ಪ್ರತಿಯೊಂದು ರಾಜ್ಯ ಸರ್ಕಾರದ ಜತೆಗೆ ಜಿಎಸ್‌ಪಿ ಸಹಭಾಗಿತ್ವ ಬೆಸೆದುಕೊಂಡು ಪ್ರತಿಯೊಂದರಲ್ಲೂ ಮುಖ್ಯಮಂತ್ರಿಗಳ ಜಿಎಸ್‌ಪಿ ಪುರಸ್ಕಾರವನ್ನು ಸ್ಥಾಪಿಸಲು ನೆರವು ನೀಡುವುದು. ಇದು ಈಗ ಈ ಕೆಳಗಿನ ಜವಾಬ್ದಾರಿಗಳನ್ನು ಹೊತ್ತುಕೊಳ್ಳಲು ಸನ್ನದ್ಧವಾಗಿದೆ:

- ಕಾರ್ಯಾಗಾರಗಳ ಮೂಲಕ ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಶಾಲಾ ಆಡಳಿತವರ್ಗದವರಲ್ಲಿ ಸಾಮರ್ಥ್ಯ ಬೆಳೆಸುವುದು
- ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ ಶಾಲೆಗಳೆರಡನ್ನೂ ಕಾರ್ಯಸಾಧ್ಯವಾದ ಮತ್ತು ಸಾಧಿಸಬಹುದಾದ 'ಹಸಿರು ನಿಯಮ'ಗಳನ್ನು ಜಾರಿಗೊಳಸಲು ಸನ್ನದ್ಧಗೊಳಸುವುದು ಮತ್ತು ಸಬಲೀಕರಿಸುವುದು. ಶಾಲಾ ಆವರಣದಲ್ಲಿ ಆಚರಿಸತಕ್ಕ ಹಸಿರು ಯೋಜನೆಗಳಾಗಿ ಈ ನಿಯಮಗಳನ್ನು ಶಾಲೆಯಲ್ಲಿ ಅನುಷ್ಠಾನಗೊಳಸಲು, ಸಹಾಯ ಮಾಡುವುದು.
- ಪರ್ಯಾಯ ಪಠ್ಯಕ್ರಮದ ವಿಕಾಸವನ್ನು ಸಾಧ್ಯವಾಗಿಸುವುದು. ಈಗಾಗಲೇ ಜಿಎಸ್‌ಪಿಯನ್ನು ಮಾಧ್ಯಮಿಕ ಮತ್ತು ಹಿರಿಯಮಾಧ್ಯಮಿಕ ಹಂತದ ವಿದ್ಯಾರ್ಥಿಗಳ ನಿರಂತರ ಮತ್ತು ಸಮಗ್ರ ಮೌಲ್ಯಮಾಪನ (Continuous and Comprehensive Evaluation) ದ ಉಪಕರಣದಂತೆ ಅನೇಕ ಶಾಲೆಗಳು ಬಳಕೆ ಮಾಡುತ್ತಿವೆ. ಆದರೆ ಜಿಎಸ್‌ಪಿಯ ಪ್ರಾಥಮಿಕ ಸವಾಲು ಎಂದರೆ ವಿದ್ಯಾರ್ಥಿಗಳು ಪರಿಸರವನ್ನು ಕುರಿತು ಇನ್ನೊಂದು ಪಠ್ಯಪುಸ್ತಕದಿಂದ ಓದಿ ನೆನಪಿಟ್ಟುಕೊಳ್ಳುವಂತೆ ಮಾಡುವುದಲ್ಲ, ಬದಲಾಗಿ ಕೆಲಸ ಮಾಡುತ್ತಲೇ ಅದನ್ನು ತಿಳಿದುಕೊಳ್ಳುವ ಅವಕಾಶವನ್ನು ಒದಗಿಸುವುದು. ಹೊಸ ಪಠ್ಯಕ್ರಮವು ಪರಿಸರ ಎನ್ನುವುದರ ಅರ್ಥ ಕೇವಲ ಮರಗಳು, ಹಕ್ಕಿಗಳು ಮತ್ತು ಹುಲಿಗಳಿಗೆ ಸೀಮಿತವಲ್ಲ, ಅದು ಮನುಷ್ಯ ಜೀವನ ಮತ್ತು ಜೀವನೋಪಾಯಕ್ಕೆ ಬೇಕಾದ ಎಲ್ಲ ಮುಖ್ಯ ಘಟಕಗಳನ್ನು ಒಳಗೊಂಡಿರುತ್ತದೆ ಎಂಬ ಸಂದೇಶವನ್ನು ಮನದಟ್ಟು ಮಾಡುವುದು.

**ಸುಮಿತಾ** ಅವರು ತಮ್ಮ ವೃತ್ತಿಜೀವನವನ್ನು ಮುಖ್ಯವಾಹಿನಿಯ ಪತ್ರಕರ್ತೆಯಾಗಿ ಪ್ರಾರಂಭಿಸಿದರು, ತಮಗೆ ವಹಿಸಿದ ಕೆಲಸ ರಾಜಕೀಯದಿಂದ ಫ್ಯಾಷನ್‌ವರೆಗೆ ಯಾವುದೇ ಸಮಸ್ಯೆಯನ್ನು ಕುರಿತು ಇರಲಿ ಪತ್ರಕರ್ತೆಯಾಗಿ ಆ ಬಗ್ಗೆ ಕೆಲಸ ಮಾಡಿರುತ್ತಾರೆ. ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್ವೈರ್ನಮೆಂಟ್ ಸಂಸ್ಥೆಗೆ ಅದರ ಪಾಕ್ಷಿಕ ಮ್ಯಾಗಜೈನ್ ಡೌನ್ ಟು ಅರ್ಥ್ ನ ಉಪ ಸಂಪಾದಕರಾಗಿ ಸೇರಿದ ನಂತರ ಅವರ ಆಸಕ್ತಿಯ ಕ್ಷೇತ್ರ ಹೆಚ್ಚು ಒಂದೇ ಕಡೆಗೆ ಕೇಂದ್ರೀಕೃತವಾಯಿತು. ನಂತರ ಅವರು ಜೈವಿಕ ವೈವಿಧ್ಯತೆಯ ಬಗ್ಗೆ ವಿಶೇಷ ಬರಹಗಾರರಾಗಿ ಕೊಡುಗೆ ನೀಡಿದರು ಮತ್ತು ಸಂಸ್ಥೆಯ ನೈಸರ್ಗಿಕ ಸಂಪನ್ಮೂಲ ನಿರ್ವಹಣಾ ಘಟಕದ ಪ್ರಭಾರ ವಹಿಸಿಕೊಂಡರು.ಆದರೆ ಬರಹಗಾರ್ತಿಯ ಪಾತ್ರವು ಯಾವಾಗಲೂ ಸಂಶೋಧಕಿಯ ಪಾತ್ರಕ್ಕಿಂತ ಹೆಚ್ಚಾಗಿ ಅವರನ್ನು ಆಕರ್ಷಿಸುತ್ತಿತ್ತು. ಆದ್ದರಿಂದ ಅವರಿಗೆ ಪರಿಸರ ಶಿಕ್ಷಣ ಘಟಕದ ಕಾರ್ಯಕ್ರಮ ನಿರ್ದೇಶಕರ ಹುದ್ದೆಯನ್ನು ನೀಡಿದಾಗ, ಅವರು ಅದನ್ನು ತಕ್ಷಣ ಒಪ್ಪಿಕೊಂಡರು, ಏಕೆಂದರೆ ಅದು ಅವರು ಎರಡೂ ಬಗೆಯ ಪಾತ್ರಗಳನ್ನು ಸಂಯೋಜಿಸಲು ಅವಕಾಶನೀಡಿತು– ಒಂದು ಸಿಎಸ್‌ಇಯ ಮೊದಲ ಶಿಕ್ಷಣ ಉಪಕ್ರಮವಾದ ಜಿಎಸ್‌ಪಿಯನ್ನು ಪ್ರಾರಂಭಿಸುವುದು ಮತ್ತು ನಡೆಸಿಕೊಂಡುಬರುವುದು ಹಾಗು ಎರಡು ವಿದ್ಯಾರ್ಥಿಗಳ ಮಾಸಿಕ ನಿಯತಕಾಲಿಕವಾದ ಗೋಬರ್ ಟೈಮ್ಸ್ ನ ಸಂಪಾದಕಿಯಾಗುವುದು. ಪ್ರಸ್ತುತ ಅವರು, ಅಭಿವೃದ್ಧಿ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ತಜ್ಞ ವಿಷಯ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ. ಅವರನ್ನು dasgupta.sumita@gmail.com ನಲ್ಲಿ ಸಂಪರ್ಕಿಸಬಹುದು. **ಅನುವಾದಕರು**: ಬಾಲಕೃಷ್ಣ ಹೊಸಂಗಡಿ, **ಪರಿಶೀಲನೆ**: ಆನಂದ ಡಿ.